**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ನವಲಗುಂದ**

| | |
|---|---|
| ಸಿ.ಸಿ. ನಂಬರ್ | - 79/2024 |
| ಸಿ.ಡಬ್ಲ್ಯೂ | - 19 |
| ಪಿ.ಡಬ್ಲ್ಯೂ | - 10 |
| ಸಾಕ್ಷಿಯ ಹೆಸರು | - ಪ್ರಮೋದ ಎಲಿಗಾರ |
| ವಯಸ್ಸು | - 46 ವರ್ಷ |
| ಉದ್ಯೋಗ | - ಪಿ ಐ, ಬೈಲಹೊಂಗಲ ಪೋಲೀಸ ಠಾಣೆ |
| ವಾಸ ಸ್ಥಳ | - ಬೈಲಹೊಂಗಲ |

ದಿನಾಂಕಃ 07/02/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ ರವರಿಂದಃ**

1. ನಾನು ಅಗಸ್ಟ-2023 ರಿಂದ ಸಪ್ಟಂಬರ್-2023 ರವರೆಗೆ ಪ್ರಭಾರ ಸಿ ಪಿ ಐ ಎಂದು ನವಲಗುಂದ ವೃತ್ತದಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

2. ದಿನಾಂಕಃ 04-09-2023 ರಂದು ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-18 ರವರಿಂದ ಕಡತವನ್ನು ಪಡೆದುಕೊಂಡು ನಂತರ ಅದೇ ದಿನ ಗುನ್ಹಾ ಸ್ಥಳಕ್ಕೆ ತೆರಳಿ ಚಾಸಾ-1 ರವರು ತೋರಿಸಿದ ಮೇರೆಗೆ ಅಪಘಾತದ ಸ್ಥಳದ ಪಂಚನಾಮೆಯನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ಬೆ.10.15 ರಿಂದ 11.15 ಗಂಟೆಯವರೆಗೆ ಪೂರೈಸಿ ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿ, ಭಾವಚಿತ್ರ ತೆಗೆದಿರುತ್ತೇನೆ. ನಂತರ ಸದರಿ ಸ್ಥಳದಲ್ಲಿ ಚಾಸಾ-6 ಮತ್ತು 7 ರವರ ಸೊಕೋ ಅಧಿಕಾರಗಳ ಸಮಕ್ಷಮ ಸ್ಥಳದಲ್ಲಿದ್ದ blood soaked found on road and control soil sample ಗಳನ್ನು ಜಪ್ತಿ ಪಡಿಸಿಕೊಂಡು ಬೆ.11.30 ರಿಂದ ಮ.12.15

ಗಂಟೆಯವರೆಗೆ ಪಂಚನಾಮೆ ಪೂರೈಸಿರುತ್ತೇನೆ. ಅದೇ ದಿನ ನ್ಯಾಯಾಲಯಕ್ಕೆ ಸ್ವತ್ತಿನ ವಿವರ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ನಂತರ ಅದೇ ದಿನ ಅಣ್ಣಿಗೇರಿ ಪೋಲೀಸ ಠಾಣಾ ಆವರಣದಲ್ಲಿ ಅಪಘಾತಪಡಿಸಿದ ಮತ್ತು ಅಪಘಾತಕ್ಕೋಳಾದ ವಾಹನಗಳನ್ನು ಚಾಸಾ-9 ರವರು ತೋರಿಸಿದ ಮೇರೆಗೆ ಚಾಸಾ-4 ಮತ್ತು 6 ರವರ ಸಮಕ್ಷಮ ವಾಹನ ಜಪ್ತಿ ಪಂಚನಾಮೆಯನ್ನು ಮ.03.00 ರಿಂದ 04.00 ವೆರೆಗೆ ಪೂರೈಸಿ ಭಾವಚಿತ್ರಗಳನ್ನು ತೆಗೆದಿರುತ್ತೇನೆ. ನಂತರ ಅದೇ ದಿನ ಚಾಸಾ-9 ರಿಂದ 14 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಅದೇ ದಿನ ನಮ್ಮ ಸಿಬ್ಬಂದಿಯಾದ ಲಕ್ಷ್ಮೀಕಾಂತ ರವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 05-09-2023 ರಂದು ಸದರಿ ವಾಹನಗಳ ಯಾಂತ್ರಿಕ ಪರೀಕ್ಷೆಗಾಗಿ ಚಾಸಾ-15 ರವರಿಗೆ ಕಳುಹಿಸಿರುತ್ತೇನೆ.

3. ದಿನಾಂಕಃ 05-09-2023 ರಂದು ಇಂಡಿಮ್ ನಿಟಿ ಬಾಂಡ್ ಪಡೆದು ಲಾರಿಯನ್ನು ಅದರ ಮಾಲೀಕರಿಗೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕಃ 11-09-2023 ರಂದು ಎಂ ವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 12-09-2023 ರಂದು ಮೃತನ ಪಿ ಎಂ ವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 13-09-2023 ರಂದು ನಮ್ಮ ಸಿಬ್ಬಂದಿ ಪಿ ಸಿ 784 ರವರು ಆರೋಪಿಯ ಹಾಗೂ ಲಾರಿ ಚಾಲಕನ ರಕ್ತದ ಮಾದರಿಯನ್ನು ಹಾಜರು ಪಡಿಸಿರುತ್ತಾರೆ. ಸದರಿ ರಕ್ತದ ಮಾದರಿಯನ್ನು ಚಾಸಾ-7 ಮತ್ತು 8 ರವರ ಸಮಕ್ಷಮ ಬೆ.11.15 ರಿಂದ 11.45 ಗಂಟೆಯವರೆಗೆ ಜಪ್ತಿ ಪಡಿಸಿಕೊಂಡು ಪಂಚನಾಮೆ ಪೂರೈಸಿ ನ್ಯಾಯಾಲಯಕ್ಕೆ ಸ್ವತ್ತಿನ ವಿವರ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸದರಿ ದಿನ ಆರೋಪಿಗೆ ಹಾಜರಾಗುವಂತೆ ತಿಳಿಸಿ ನೋಟಿಸ ನೀಡಿರುತ್ತೇನೆ. ದಿನಾಂಕಃ 15-09-2023 ರಂದು ಆರೋಪಿ ಠಾಣೆಗೆ ಹಾಜರಾಗಿದ್ದು, ಆತನ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 20-09-2023 ರಂದು ಜಪ್ತಿ ಪಡಿಸಿಕೊಂಡ ಮಾದರಿಗಳನ್ನು ಚಾಸಾ-17 ರವರಿಗೆ ಕಳುಹಿಸಿರುತ್ತೇನೆ. ಅದೇ ದಿನ ಮುಂದಿನ ತನಿಖೆಯನ್ನು ಚಾಸಾ-20 ರವರಿಗೆ ವಹಿಸಿರುತ್ತೇನೆ.

4. ಸಾಕ್ಷಿಯು ನಿ ಪಿ 2 ರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಹಿಯನ್ನು **ನಿ ಪಿ 2 (ಡಿ)**, ಸಾಕ್ಷಿಯು ನಿ ಪಿ 6 ರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಹಿಯನ್ನು **ನಿ ಪಿ 6 (ಬಿ)** ಎಂದು ಗುರುತಿಸಲಾಯಿತು. ವಾಹನ ಜಪ್ತಿ ಪಂಚನಾಮೆ **ನಿಪಿ-16** ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-16(ಎ)** ಎಂದು ಗುರುತಿಸಲಾಯಿತು. ರಕ್ತದ ಮಾದರಿ ಜಪ್ತಿ ಪಂಚನಾಮೆ **ನಿಪಿ-17** ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-17(ಎ)** ಎಂದು ಗುರುತಿಸಲಾಯಿತು. ಮೋಟಾರ

ಸೈಕಲ್ ಕುರುಹಗಳನ್ನು ಸಂಗ್ರಹಿಸುವ ಪಂಚನಾಮೆ ನಿಪಿ-18 ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-18(ಎ)** ಎಂದು ಗುರುತಿಸಲಾಯಿತು. ಪಿ ಎಂ ವಿ ವರದಿ **ನಿಪಿ-19** ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-19(ಎ)** ಎಂದು ಗುರುತಿಸಲಾಯಿತು. ಎಂ ವಿ ವರದಿ **ನಿಪಿ-20** ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-20(ಎ)** ಎಂದು ಗುರುತಿಸಲಾಯಿತು. ಇಂಡಿಮ್ ನಿಟಿ ಬಾಂಡ್ ನ್ನು **ನಿಪಿ-21** ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-21(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ನೋಡಿ ಗುರುತಿಸಿದ ಭಾವಚಿತ್ರಗಳನ್ನು **ನಿಪಿ-22** ಮತ್ತು **23** ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಎಂ ಎಸ್ ಎಚ್ ವಕೀಲರಿಂದಃ**

ನಾನು ಗುನ್ಹಾ ಸ್ಥಳಕ್ಕೆ ಹೋಗಿಲ್ಲ ಹಾಗೂ ಪಂಚರ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿಲ್ಲ, ಯಾವುದೇ ಕಚ್ಚಾ ನಕಾಶೆಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಲಾರಿ ಚಾಲಕನ ರಕ್ತದ ಮಾದರಿಯನ್ನು ಆತ ಮದ್ಯ ಸೇವಿಸಿದ್ದರ ಕುರಿತು ಪರೀಕ್ಷಿಸಲು ಪಡೆದುಕೊಂಡಿರುತ್ತೇವೆ. ಸದರಿ ಅಪಘಾತ ಲಾರಿ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದು ನನ್ನ ತನಿಖೆಯಲ್ಲಿ ಗೊತ್ತಾಗಿರುತ್ತದೆ. ಕಾರಣ ಸದರಿಯವನ ರಕ್ತದ ಮಾದರಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಾನು ಹಾಗೂ ಚಾಸಾ-1 ರವರು ಸೇರಿ ಆರೋಪಿಯ ವಿರುದ್ಧ ಸುಳ್ಳು ದಾಖಲೆಗಳನ್ನು ಸೃಷ್ಟಿ ಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಕೃತ್ಯ ಎಸಗದಿದ್ದರೂ ಸಹ ಚಾಸಾ-1 ರವರಿಗೆ ಸಹಾಯ ವಾಗಲು ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**